

■ ಅನು ಬೆಳ್ಳೆ

# ಹಿತೇಶನ ವಿಷಯ ಕೆದಕಿದ ರಾಜಧಾನಿ

'ಜವಾಬುಬಾರಿ ನನ್ನದೆ. ಆದ್ರೆ ನಿನ್ನೆ ರಾತ್ರಿ ಯಜಮಾನ್ರಿಗೂ ಅವರಿಗೂ ದೊಡ್ಡ ಜಗಳ ಆಯ್ತು. ಅದೂ ಮಗಳು ಕಾಣೆಯಾದ ವಿಷಯದಲ್ಲಿ. ಅಮ್ಮೋರು ಎಗರಾಡಿದ್ರು. ಯಜಮಾನ್ರು ಸುಮ್ಮನಿದ್ರು. ಕೊನೆಗೆ ಅವರ ಮಾತು ವಿಪರೀತಕ್ಕೋಗಿ ಕೊನೆಗೆ ನಾನು ಮನೆ ಬಿಟ್ಟು ಹೋಗ್ತೀನಿಂತ ಅಮ್ಮೋರು ಕೂಗಾಡಿದ್ರು. ಯಜಮಾನ್ರು ಹೋಗು ಅಂದು ಬಿಟ್ರು. ಅದೇ ಕಾರಣ ಅನ್ಸುತ್ತೆ'

'ಅಂದ್ರೆ, ಅಮ್ಮೋರು ಯಜಮಾನರು ಹೋದ ಮೇಲೆ ಯಾರಿಗಾದರೂ ಫೋನ್ ಮಾಡಿದ್ದಾರಾ?'

ನಳಿನಿ ನೆನಪಿಸಿಕೊಳ್ಳುವಂತೆ ತೋರು ಬೆರಳನ್ನು ತುಟಿಯ ಮಧ್ಯಕ್ಕಿಟ್ಟು ಕತ್ತು ಓರೆ ಮಾಡಿ ನಿಂತಳು.

'ಹಾಂ! ಜ್ಞಾಪಕ ಇದೆ. ಅವ್ರು ಫೋನ್ ಮಾಡಿದ್ರು. ಕಾರು ತರೋದಿಕ್ಕೆ...'

'ಯಾರಿಗೆ ಅನ್ನೋದು ಗೊತ್ತಾ?'

'ಇಲ್ಲ, ಅಮ್ಮೋರು ಹೊರಟು ಕೂತ್ರು. ಆಗ ನಾನು ಎಲ್ಲಿಗೇಂತ ಕೇಳ್ದೆ. ಅವ್ರು ನನ್ನ ಮಾತಿಗೆ ಉತ್ತರ ಕೊಡ್ಲಿಲ್ಲ. ಮತ್ತೆ ಮತ್ತೆ ಕೇಳ್ದೆ. ಕೊನೆಗೆ ಸುಡುಗಾಡಿಗೆ ಅಂದ್ರು. ಹಾಗೆ ಸುಮ್ಮನಾಬಿಟ್ಟೆ ನಾನು'

ನಳಿನಿ ಅಧಿಕಾರಿಗೆ ಉತ್ತರಿಸಿ ಸೋತು ಹೋದಂತೆ ಬೆವತು ಹೋದಳು.

'ಸರಿ, ನಾನು ಬಂದಿರೋ ವಿಷ್ಯ ಸಣ್ಣಮ್ಮೋರಿಗೆ ತಿಳ್ಸು. ಹಾಗೆ ಕಿರಣನನ್ನು ಠಾಣೆಗೆ ಬರೋಕೆ ಹೇಳು' ಅಧಿಕಾರಿ ಕಾಶಮ್ಮನ ಸಹಾಯಕಿಗೆ ಹೇಳಿ ಹೊರಗೆ ನಡೆದ.

ವೆರಾಂಡ ದಾಟಿ ಇನ್ಸ್‌ಪೆಕ್ಟರ್ ಇಂಟರ್‌ಲಾಕ್‌ನ ದಾರಿಯನ್ನು ಸವೆಸಿ ಗೇಟಿನ ಬಳಿ ಬಂದಾಗ ಅವನಿಗೆ ಆಶ್ಚರ್ಯವಾಗುವಂತೆ ಕಪ್ಪಗಿನ ದೊಡ್ಡ ಗೇಟು ಮುಚ್ಚಿಕೊಂಡಿತ್ತು. ಜೊತೆಗೆ ದೊಡ್ಡ ಬೀಗ ಕೂಡ ಜಡಿದಿತ್ತು. ತಾನು ಒಳಗೆ ಬಂದ ಮೇಲೆ ಯಾರೋ ಗೇಟು ಮುಚ್ಚಿದ್ದಾರೆ. ಅಧಿಕಾರಿ ಸುತ್ತಲೂ ನೋಡಿದ. ಯಾರೂ ಕಾಣಿಸಲಿಲ್ಲ. ನಳಿನಿ ತನ್ನ ಎದುರಿನಲ್ಲಿಯೇ ಇದ್ದದ್ದು. ಅಡುಗೆ ಕೆಲಸದವನನ್ನು ಬಿಟ್ಟರೆ ಮತ್ತಾರು ಅಲ್ಲಿರಲಿಲ್ಲ. ಹಾಗಾದರೆ ಅಡುಗೆ ಕೆಲಸದಾಳುವೇ ಗೇಟು ಮುಚ್ಚಿ ಬೀಗ ಜಡಿದ್ದಿದ್ದಾನೆ.

ಇನ್ಸ್‌ಪೆಕ್ಟರ್ ರಾಜಧಾನಿ ಪಕ್ಕದಲ್ಲಿಯೇ ಇದ್ದ ಸಣ್ಣ ಗೇಟು ತೆರೆದು ಹೊರಗೆ ನಡೆದು ಜೀಪನ್ನೇರಿ ಠಾಣೆಯತ್ತ ಹೊರಟ.

* * *

ಸೂರ್ಯನ ಹೂ ಬಿಸಿಲಿಗೆ ಕಣ್ಣುಗಳನ್ನು ಹೊಸಕಿಕೊಂಡ ಪಾಂಬು ತನ್ನ ಕಾರಿನಿಂದ ಹೊರಕ್ಕೆ ಜಿಗಿದು ನಿಂತ. ಎದುರಿಗೆ ನಿಂತಿದ್ದ ಎರಡಂತಸ್ತಿನ ಹಳೆಯ ಕಾಲದ ಕಟ್ಟಡದ ಮುಂದೆ ನಿಂತು ಬಾನೆತ್ತರಕ್ಕೆ ನೋಟ ಹಾಯಿಸಿದ. ತನ್ನ ಯೋಜನೆಗಳನ್ನೆಲ್ಲಾ ಬುಡಮೇಲು ಮಾಡಿದ್ದ ಮುತ್ತುಚಾಂಡಿಯ ಮೇಲೆ ಬೇಸರಿಸಿಕೊಂಡ. ಸಹಾಯಕ್ಕೆ ಸಿಗದ ಮನುಷ್ಯ. ಗೊಣಗಿಕೊಂಡ ಪಾಂಬುವಿಗೆ ಇನ್ನೂ ಅವನ ಮೇಲಿನ ಭರವಸೆ ದೂರವಾಗಲಿಲ್ಲ. ಕೊನೆಯ ಪ್ರಯತ್ನವೆನ್ನುವಂತೆ ಅವನು ಕಟ್ಟಡದ ಮೆಟ್ಟಿಲುಗಳನ್ನೇರ ತೊಡಗಿದ.

ಸಿಮೆಂಟು ಕಿತ್ತು ಹೋದ ಮೆಟ್ಟಿಲುಗಳ ಮೇಲಿನ ನಡಿಗೆ ಮುಂದಿನ ದಾರಿಯನ್ನು ತೋರಿಸಿತು. ನಿರ್ಧಾರ ಕಠಿಣವಾಗದಿದ್ದರೆ ತನಗೆ ಸೋಲು ಕಟ್ಟಿಟ್ಟ ಬುತ್ತಿ. ಮನದಲ್ಲಿಯೇ ಮುತ್ತುಚಾಂಡಿಯನ್ನು ಬೈಯುತ್ತಾ ಏರಿದ.